**ಇಂದು ದಿಃ 09-12-2022 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಬಿ.ಎಂ.ಎಸ್ ವಕೀಲರಿಂದಃ**

ನನ್ನ ಮತ್ತು 4 ನೇ ಪ್ರತಿವಾದಿಯ ಮದುವೆ 1999 ಜೂನ್ 6 ರಲ್ಲಿ ಸಿರಿಗೇರಿ ಮಠದಲ್ಲಿ ಆಗಿರುತ್ತದೆ ಎಂದರೆ ಸರಿ. ನಮ್ಮ ಮದುವೆಯಾಗಿ 1-2 ತಿಂಗಳಲ್ಲಿ ವಾದಿ ಮನೆ ಬಿಟ್ಟು ಹೋಗಿ ನೀಲಮ್ಮ ಎನ್ನುವವರಿಗೆ ಮದುವೆಯಾಗಿದ್ದಾರೆಂದರೆ ಸರಿ. ವಾದಿಯು ನಿ.ಡಿ-69 ರಲ್ಲಿ ಕಾಣಿಸುವ ನಮ್ಮ ಹಳೆಯ ಮನೆಯಲ್ಲಿ ವಾಸ ಮಾಡಲು ಪ್ರಾರಂಭಿಸಿದ್ದಾರೆಂದರೆ ಸರಿ. ಸದರಿ ಮನೆ ಹಾಳು ಬಿದ್ದಿದ್ದು, ಅದನ್ನು ದುರಸ್ಥಿ ಮಾಡಿಕೊಂಡು ಹೋಗಿದ್ದಾರೆ. ನಮ್ಮ ಹಳೆ ಮನೆ ಬಿದ್ದಿದ್ದರಿಂದ ನಮ್ಮ ತಂದೆ 1 ನೇ ಪ್ರತಿವಾದಿಯ ಮನೆಗೆ ಹೋಗಿ ಉಳಿದುಕೊಂಡಿದ್ದಾರೆ. ನಮ್ಮ ಹಳೆ ಮನೆ ಯಾವಾಗ ಬಿದ್ದು ಹೋಗಿರುತ್ತದೆ ಮತ್ತು 1 ನೇ ಪ್ರತಿವಾದಿಯ ಮನೆಗೆ ಬಂದು ಎಷ್ಟು ದಿವಸ ವಾಸವಾಗಿದ್ದೇವೆಂದು ನನಗೆ ನೆನಪಿರುವುದಿಲ್ಲ. ನಮ್ಮ ಮದುವೆಯ ಕಾಲಕ್ಕೆ ನಾವು 1 ನೇ ಪ್ರತಿವಾದಿ ವಾಸ ಮಾಡುವ ಜನತಾ ನಿವೇಶನದಲ್ಲಿರುವ ಮನೆಯಲ್ಲಿ ವಾಸವಾಗಿದ್ದೆವು. ವಾದಿಯು ಹಳೆ ಮನೆ ಬಿದ್ದ ನಂತರ, ಅಲ್ಲಿ ಇಲ್ಲಿ ವಾಸ ಮಾಡಿಕೊಂಡು ಕೆಲಸ ಮಾಡುತ್ತಿದ್ದರು. ನಾನೇ 1 ನೇ ಪ್ರತಿವಾದಿಗೆ ಗೊತ್ತಾಗದಂತೆ ಊಟ ನೀಡುತ್ತಿದ್ದೆನು. 1 ನೇ ಪ್ರತಿವಾದಿ ಮೊದಲು ಮನೆ ಬಿಟ್ಟು ಹೋಗಿದ್ದರು, ನಂತರ ನಮ್ಮ ತಂದೆಗೆ ಮತ್ತು ವಾದಿಗೆ ಜಗಳ ಆಗಿ, ವಾದಿಯು ಮನೆ ಬಿಟ್ಟು ಹೋಗಿದ್ದಾರೆ. ಹಳೆ ಮನೆ ಬಿದ್ದು ಹೋದ ನಂತರ, ವಾದಿ ಮತ್ತು ನಾವೆಲ್ಲರೂ ಜನತಾ ನಿವೇಶದಲ್ಲಿರುವ ಮನೆಯಲ್ಲಿ ವಾಸವಾಗಿದ್ದೆವು ಎನ್ನುವುದು ಸರಿಯಲ್ಲ. ನಮ್ಮ ಮದುವೆಯ ಕಾಲಕ್ಕೆ ನಾವೆಲ್ಲರೂ ಒಟ್ಟಿಗೆ ವಾಸವಾಗಿದ್ದೆವು ಎನ್ನುವುದು ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ನಿ.ಪಿ-44 ರಂತೆ ಕರಾರು ಮಾಡಿಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ತಂದೆ ಜೀವಿತಾವಧಿಯಲ್ಲಿ ಹಳೆ ಮನೆ ವಾದಿಗೆ ಹೋಗಬೇಕೆಂದು ಮತ್ತು ಜನತಾ ಮನೆ 1 ನೇ ಪ್ರತಿವಾದಿಗೆ ಹೋಗಬೇಕೆಂದು ಮೌಖಿಕವಾಗಿ ಕರಾರು ಮಾಡಿಕೊಂಡಿದ್ದರು. ಉಳಿದ ವಸ್ತುಗಳನ್ನು ನಮ್ಮ ತಂದೆ ತಾಯಿ ಮೃತಪಟ್ಟ ನಂತರ, ಹಂಚಿಕೊಳ್ಳಬೇಕೆಂದು ಕರಾರು ಆಗಿತ್ತು ಎಂದರೆ, ಸಾಕ್ಷಿಯು ಲೋಕ ರೂಡಿಯಂತೆ ತಂದೆ ತಾಯಿ ಮೃತಪಟ್ಟ ನಂತರ ಹಂಚಿಕೆ ಮಾಡಿಕೊಳ್ಳಬೇಕೆಂದು ಉತ್ತರಿಸುತ್ತಾರೆ. ವಾದಿ ಮೌಖಿಕ ಕರಾರಿಗೆ ಒಪ್ಪಿದ್ದಾನೆ ಅಥವಾ ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಕೋಡಿಹಳ್ಳಿ ಗ್ರಾಮದ ಜಮೀನನ್ನು ಈಗ 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾರೆ. ಸದರಿ ಜಮೀನನ್ನು ಒಟ್ಟು ಕುಟುಂಬದ ಆಧಾಯದಿಂದ ಖರೀದಿಸಿ ಒಟ್ಟು ಕುಟುಂಬದಲ್ಲಿ ಸಾಗುವಳಿ ಮಾಡುತ್ತೇವೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ವೀಳ್ಯಾದೆಲೆ ಮಾರುಕಟ್ಟೆ ಹರಿಹರದ ಬೈಪಾಸ್ ನಲ್ಲಿದೆ

ಎಂದರೆ ಸರಿ. 1 ನೇ ಪ್ರತಿವಾದಿ ಎಲೆ ಪೆಂಡಿ ಮಾರಾಟ ಮಾಡಲು ಹೋಗುತ್ತಿರಲಿಲ್ಲ. ನಿ.ಪಿ-34 ನನ್ನ ಮದುವೆಯ ಭಾವ ಚಿತ್ರ ಎಂದರೆ ಸರಿ. ನಿ.ಪಿ-35 ಹುಲ್ಲತ್ತಿಯ ಮನೆಯ ಭಾವ ಚಿತ್ರ ಎಂದರೆ ಸರಿ. ನಿ.ಪಿ-35 ರಲ್ಲಿ ಊಟ ಮಾಡುತ್ತಿರುವ ಭಾವ ಚಿತ್ರ ಪಿ.ಡಬ್ಲ್ಯೂ-4 ರವರ ಭಾವ ಚಿತ್ರ ಎಂದರೆ ಸರಿ. ನಮ್ಮ ಮದುವೆಯ ಭಾವ ಚಿತ್ರಗಳನ್ನು ಪಿ.ಡಬ್ಲ್ಯೂ-4 ರವರು ತೆಗೆದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.ಪಿ.ಡಬ್ಲ್ಯೂ-4 ರವರು ವಾದಿಯ ಸ್ನೇಹಿತನಾಗಿದ್ದು, ನಮ್ಮ ಮನೆಗೆ ಬರುತ್ತಿದ್ದರು. ಅವರು ಭಾವ ಚಿತ್ರ ತೆಗೆಯುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ಭಾವ ಚಿತ್ರ ವನ್ನು ಯಾರು ತೆಗೆದಿದ್ದಾರೆಂದು ನನಗೆ ಗೊತ್ತಿಲ್ಲ. ನಾವು ಭಾವ ಚಿತ್ರವನ್ನು ತೆಗೆಯಲು ಯಾರಿಗೂ ಹೇಳಿರುವುದಿಲ್ಲ. ಪಿ.ಡಬ್ಲ್ಯೂ-4 ರವರು ಮದುವೆಯ ಭಾವ ಚಿತ್ರವನ್ನು ತೆಗೆದಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಿ.ಡಬ್ಲ್ಯೂ-4 ರ ಬೀಡಾ ಅಂಗಡಿ ಬೈಪಾಸ್ ನಲ್ಲಿದೆ ಎನ್ನುವುದು ಗೊತ್ತಿಲ್ಲ. ನಮ್ಮ ತಂದೆ, ದೊಡ್ಡಪ್ಪ ಮೃತಪಟ್ಟ ನಂತರ, 1 ನೇ ಪ್ರತಿವಾದಿ ನಮ್ಮ ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎನ್ನುವುದು ಸರಿಯಲ್ಲ. ನಾನು 2 ಮತ್ತು 5 ನೇ ಪ್ರತಿವಾದಿಯರು ಒಂದೇ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, 2 ಮತ್ತು 5 ನೇ ಪ್ರತಿವಾದಿಯರಿಗೆ ಮಾಹಿತಿ ಇರುವುದಿಲ್ಲ ಎನ್ನುವುದನ್ನು ಅವರನ್ನೇ ಕೇಳ ಬೇಕೆಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಒಟ್ಟು ಕುಟುಂಬದಿಂದ ಹೊರಗೆ ಹೋಗಿರುವುದಿಲ್ಲ ಮತ್ತು ಸ್ವತಂತ್ರವಾಗಿ ಯಾವುದೇ ದುಡಿಮೆ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಮಕ್ಕಳಿಗೆ ಓದಲು ಹಣಕಾಸಿನ ಸಹಾಯ ಮಾಡಿದ್ದಾನೆಂದು ಆತನ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಜನತಾ ನಿವೇಶದಲ್ಲಿರುವ ಮನೆ ಮತ್ತು ಕೋಡಿಹಳ್ಳಿ ಜಮೀನು, ಒಟ್ಟು ಕುಟುಂಬದ ಆಸ್ತಿಯೆಂದು ನ್ಯಾಯಾಲಯ ತೀರ್ಮಾನಕ್ಕೆ ಬಂದರೆ ನಾನು ಭಾಗ ತೆಗೆದುಕೊಳ್ಳುವುದಿಲ್ಲ. ದಾವಾ ಬಿ ಮತ್ತು ಸಿ ಕ್ರ.ಸಂ.3 ಮತ್ತು 4 ಶೆಡ್ಯೂಲ್ ಆಸ್ತಿಗಳಲ್ಲಿ ನನಗೆ ಭಾಗ ಬೇಡ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.